


ಎಡದಿಂದ ಬಲಕ್ಕೆ :

1. ವಿಷವಾಯಿತು ಅಲ್ಲಿ , ಕಣ್ಣೀರು ತರುವ ಗಾಳಿ (4)
3. ಈ ದಾರಿಯಲ್ಲಿ ದೂರವೇನಿಲ್ಲ ಸಾಗರ (3)
4. ಎತ್ತಿನ ಗಾಡಿಗೆ ತುಂಬುತ್ತಿರುವುದೆಲ್ಲ ಬರೀ ಮಣ್ಣಿನ ಪಾತ್ರೆ (3)
6. ಮರುಳನ ಪತ್ತೆಗೆ ನೆರವಾದದ್ದು ನಿರ್ದಿಷ್ಟ ಸುವಾಸನೆ (4)
7. ಪೂರ್ವಾಪರದಲ್ಲಿ ಕುಲ – ಗೋತ್ರ ವಿವರವೂ ಇರಲಿ (3)
9. ಸವೆಯಲು ಆರಂಭವಾಯಿತೇ ? ಪ್ರಾಯ ಏನು ? (3)
11. ಗರಿಮೆಯನ್ನು ಪ್ರದರ್ಶಿಸಲು ಪಟ್ಟಣವೇ ಸರಿ (3)
13. ಜೊತೆಗಾರನ ವಸ್ತುಗಳಾದ್ದರಿಂದ ಜೋಪಾನ ಇರಲಿ (3)
15. ಅರಸನ ಮನೆಯೇ ಈಗ ಜೈಲು (4)
17. ನೀರಿನಾವರಣಗಳಿಗೆಲ್ಲ ಒಡೆಯ – ಜಲದೇವತೆ (3)
18. ಮುರುಕು ಮನೆ ನೋಡಿದರೇ ಕರುಣೆ ಬರುತ್ತದೆ (3)
19. ಸರ ನೀಡುವಂತೆ ಕೇಳಿದ್ದಕ್ಕೆ ಸಿಕ್ಕಿದ್ದು ಬಿಸಿ ಬಿಸಿ ಜಲ (4)

ಮೇಲಿಂದ ಕೆಳಕ್ಕೆ :

1. ಅವನ ಪದ್ಯದಲ್ಲಿನ ಅರಸ ಯಾರು ? (3)
2. ಗಯ್ಯಾಳಿ ಮಹಿಳೆಯರ ಒಂದು ಜೋಡಿ (3)
3. ಅಲ್ಲಿ ಯಾವ ವಸ್ತುವೂ ಇರಲೇ ಇಲ್ಲ ಎಂಬುದೇ ಸತ್ಯ (3)
5. ಯುಗಳ ಗೀತೆಯ ಕವಿ ಆತನ ಮಿತ್ರ (3)
7. ಆತ ಕಷ್ಟ ಪರಿಹರಿಸುತ್ತಾನೆಂಬುದು ನಗು ತರುವ ವಿಷಯ , ಬಿಡಿ (4)
8. ಹೊಸ ದಾರಿ ಬಳಸುವವರ ಬಳಿ ಇರಲೇಬೇಕು ಪರವಾನಗಿ (4)
9. ಜವರಾಯನಲ್ಲೇ ಬೆರೆತುಹೋಗಿದ್ದಾನೆ 'ಕಾಡಿನ ಅರಸ' (4)
10. ಗಾರೆ ಕಲಸುವವರ ಕಂಠದಲ್ಲಿ ದೇವತೆಯಂಥ ಹಾಡು (4)
12. ಊರ ಗೌಡನನ್ನೇ ನಡುಗಿಸಿತು ಆ ಮಂಗ ಮುಂದಾಳು (3)
14. ವಿತ್ತಕ್ಕಾಗಿ ವರ್ತಕನಿಗೆ ಭಾರೀ ಆತುರ (3)
15. ಸುಣ್ಣ ಹಚ್ಚಿಸುವ ಕೆಲಸದಲ್ಲೂ ಇದೆಂಥ ಹೋರಾಟ , ಸ್ಪರ್ಧೆ?(3)
16. ನೂರು ಮಾರು ನಡೆದೊಡನೆ ಮೆಲುಕಾಟ ಶುರು (3)

## 10-12-15ರ ಉತ್ತರಗಳು

ಎಡದಿಂದ ಬಲಕ್ಕೆ:

1. ಸನ್ನಿವೇಶ 3. ಸರಲ (= ಸರಳ ); 4. ಲಾಘವ 6. ಹೆಗ್ಗಳಿಕೆ 7. ತಿಲೋದಕ 8. ಹರಿನಾಮ 10. ರಸಬಾಳೆ 12. ಅಭಿಧಾನ 14. ಉರಿಭಯ 16. ಲಿಖಿಸು 17. ಜಮುನ 18. ಕುಲಧನ

ಮೇಲಿಂದ ಕೆಳಕ್ಕೆ:

1. ಸಲಹೆ 2. ಶಲಾಕೆ 3. ಸಹೋದರ 5. ವಲ್ಲರಿ 7. ತಿರಸ್ಕಾರ 9. ಮತಿಹೀನ 11. ಬಾನುಲಿ 13. ಸ್ವಾಭಿಮಾನ 14. ಉಸುಕು 5. ಯಜನ

## ಪ್ರಶ್ನಾ ೦ಕಣ


# ಆರ್ಖಿಯಾಪ್ಟೆರಿಕ್ಸ್ ಏನು ವಿಶೇಷ?

ಪ್ರಾಚೀನ ಗ್ರೀಕ್ ಭಾಷೆಯ 'ಆರ್ಖಿಯೋಸ್' ಮತ್ತು 'ಪ್ಟೆರಿಕ್ಸ್' ಪದಗಳಿಂದ ನಿಷ್ಪನ್ನಗೊಂಡಿರುವ ಹೆಸರು ಆರ್ಖಿಯಾಪ್ಟೆರಿಕ್ಸ್. ಹಾಗೆಂದರೆ 'ಪುರಾತನ ಗರಿ' ಅಥವಾ 'ಪುರಾತನ ರೆಕ್ಕೆ' ಎಂದರ್ಥ.

ವಾಸ್ತವವಾಗಿ ಆರ್ಖಿಯಾಪ್ಟೆರಿಕ್ಸ್ ಪಳೆಯುಳಿಕೆ ರೂಪದಲ್ಲಿ ಲಭಿಸಿರುವ ಹಕ್ಕಿಯೊಂದರ ಹೆಸರು (ಚಿತ್ರ 2). ಆರ್ಖಿಯಾಪ್ಟೆರಿಕ್ಸ್ ಕೇವಲ ಪ್ರಾಚೀನ ಹಕ್ಕಿ ಅಲ್ಲ ; ಅದು ಅತ್ಯಂತ ಪುರಾತನವಾದ ಹಕ್ಕಿ; ಖಗ ಸಂಕುಲದ ಪ್ರಪ್ರಥಮ ಹಕ್ಕಿ. ಇಸವಿ 1861 ರಲ್ಲಿ ಜರ್ಮನಿಯಲ್ಲಿ ಲಭಿಸಿದ ಈ ಮೂಲ ಹಕ್ಕಿ ಪಳೆಯುಳಿಕೆ ಆಗಿನಿಂದಲೂ ವಿಶ್ವ ವಿಖ್ಯಾತ; ಚಾರ್ಲ್ಸ್ ಡಾರ್ವಿನ್ ನ ಜೀವವಿಕಾಸ ಸಿದ್ಧಾಂತ ಕುರಿತ 'ದಿ ಆರಿಜಿನ್ ಆಫ್ ಸ್ಪೀಶೀಸ್' ಪ್ರಕಟಗೊಂಡ ಎರಡೇ ವರ್ಷಗಳ ನಂತರ ಲಭಿಸಿ ಆ ಸಿದ್ಧಾಂತಕ್ಕೆ ಮತ್ತೊಂದು ಭದ್ರ ಆಧಾರ ಒದಗಿಸಿದ ಪಳೆಯುಳಿಕೆ ಇದು.

ಆರ್ಖಿಯಾಪ್ಟೆರಿಕ್ಸ್ ನ ವಿಶೇಷ ಏನೆಂದರೆ ಅದು ಸರೀಸೃಪಗಳಾದ ಡೈನೊಸಾರ್ ಗಳ ಕೆಲವು ಲಕ್ಷಣಗಳ ಜೊತೆಗೆ ಆಧುನಿಕ ಹಕ್ಕಿಗಳ ಕೆಲ ನಿರ್ಣಾಯಕ ಲಕ್ಷಣಗಳನ್ನೂ ಮೈಗೂಡಿಸಿಕೊಂಡಿದೆ. ಆರ್ಖಿಯಾಪ್ಟೆರಿಕ್ಸ್ ನ ಬಾಯಲ್ಲಿ ಡೈನೊಸಾರ್ ಗಳಂತೆ ಚೂಪಾದ ದಂತ ಪಂಕ್ತಿಗಳಿವೆ ; ಎಲುಬು ಸಹಿತವಾದ ಉದ್ದವಾದ ಬಾಲ ಇದೆ. ಜೊತೆಗೆ ಆಧುನಿಕ ಹಕ್ಕಿಗಳಂತೆ ಪುಕ್ಕ – ಗರಿ – ರೆಕ್ಕೆಗಳಿವೆ (ಚಿತ್ರ 1). ಹಾಗಾಗಿ ಆರ್ಖಿಯಾಪ್ಟೆರಿಕ್ಸ್ ಡೈನೊಸಾರ್ ಗಳು ಮತ್ತು ಹಕ್ಕಿಗಳ ನಡುವಣ ಜೀವ ವಿಕಾಸದ ಕೊಂಡಿಯಂತಿದೆ. ಡೈನೊಸಾರ್ ಗಳಲ್ಲಿ ರೂಪುಗೊಂಡ ಜೈವಿಕ ಮಾರ್ಪಾಡುಗಳೇ ಹಕ್ಕಿಗಳನ್ನು ರೂಪಿಸಿದ್ದು– ಹಾಗೆಂದರೆ ಹಕ್ಕಿಗಳ ವಿಕಾಸ ಸಂಭವಿಸಿದ್ದೇ ಡೈನೊಸಾರ್ ಗಳಿಂದ ಎಂಬುದನ್ನು ಆರ್ಖಿಯಾಪ್ಟೆರಿಕ್ಸ್ ನಿರ್ವಿವಾದಗೊಳಿಸಿದೆ .

ಆರ್ಖಿಯಾಪ್ಟೆರಿಕ್ಸ್ ಬದುಕಿದ್ದ ಕಾಲ ಈಗ್ಗೆ ಒಂದುನೂರೈವತ್ತು ದಶ ಲಕ್ಷ ವರ್ಷ ಹಿಂದೆ. ಸಮರ್ಥ ಹಾರಾಟ ಮೈಗೂಡಿದ್ದ ಈ ಜೀವಿಯದು ಪುಕ್ಕ




ಆವರಿಸಿದ್ದ, ಬಿಸಿರಕ್ತದ ಶರೀರ; ಗರಿಗಳಿಂದ ರೂಪುಗೊಂಡಿದ್ದ ವಿಶಾಲ ರೆಕ್ಕೆಗಳು ಕೂಡ. ಒಂದೂವರೆ ಅಡಿ ಉದ್ದದ , ಒಂದು ಕಿಲೋ ತೂಕದ ದೇಹ. ಈಗಿನ ಕಾಗೆಗಳ ಗಾತ್ರ. ನೆಲದ ಮೇಲೂ, ಪೊದೆ ಗಿಡ ಗಂಟಿ ವೃಕ್ಷಗಳ ಮೇಲೂ ಜೀವನ. ಚಿಕ್ಕ ಪುಟ್ಟ ಪ್ರಾಣಿಗಳನ್ನು ಬೇಟೆಯಾಡಿ ತಿನ್ನುವ ಆಹಾರ ಕ್ರಮ.

ಇತ್ತೀಚೆಗೆ ಚೀನಾದಲ್ಲಿ ಪತ್ತೆಯಾದ ಮತ್ತೊಂದು ಪ್ರಾಚೀನ ಖಗ ರೂಪಿ ಡೈನೊಸಾರ್ ನ ಪಳೆಯುಳಿಕೆ ಆರ್ಖಿಯಾಪ್ಟೆರಿಕ್ಸ್ ನ 'ಪ್ರಪ್ರಥಮ ಹಕ್ಕಿ' ಎಂಬ ಅಗ್ಗಳಿಕೆಯ ಸ್ಥಾನವನ್ನು ಅಲುಗಾಡಿಸಿತ್ತು. 'ಅರೋರ್ನಿಸ್ ಕ್ಸೂಯಿ' ಎಂಬ ಹೆಸರಿನ ಆ ಜೀವಿ ಆರ್ಖಿಯಾಪ್ಟೆರಿಕ್ಸ್ ನಂಥದ್ದೇ ಲಕ್ಷಣಗಳನ್ನು ಹೊಂದಿದ್ದು ಅದಕ್ಕಿಂತ ಲಕ್ಷಾಂತರ ವರ್ಷ ಹೆಚ್ಚು ಪ್ರಾಚೀನ ಕಾಲದ್ದಾಗಿತ್ತು. ಆದರೆ ಆ ಪಳೆಯುಳಿಕೆಯ ವಿಸ್ತೃತ ಅಧ್ಯಯನ ಅದು ಆರ್ಖಿಯಾಪ್ಟೆರಿಕ್ಸ್ ನಷ್ಟು ಪರಿಪೂರ್ಣ ಹಕ್ಕಿ ಆಗಿರಲಿಲ್ಲ ಎಂಬುದನ್ನು ನಿಚ್ಚಳಗೊಳಿಸಿತು. ಹಾಗಾಗಿ ಆರ್ಖಿಯಾಪ್ಟೆರಿಕ್ಸ್ ನ ಹೆಗ್ಗಳಿಕೆ ಈಗಲೂ ಹಾಗೆಯೇ ಉಳಿದಿದೆ.

■ ಎನ್. ವಾಸುದೇವ್